ಇ) ಹಾಗಿದ್ದಲ್ಲಿ ಸದರೀ ಗ್ರಾಮದ ಜನತೆಗೆ ಹಾಗೂ ಆ ಮನೆಯ ಜನರಿಗೆ ಏನಾದರೂ ಅಪಾಯವು ಆದಲ್ಲಿ ಅಧಿಕಾರಿಗಳೇ ಜವಾಬ್ದಾರರಾಗುವರೆಂಬುದು ನಿಜವಲ್ಲವೆ ?

ಈ) ಹೀಗಿದ್ದಾಗ ಸದರಿ ವಿದ್ಯುತ್ ಕಂಬವನ್ನು ಸ್ಥಳಾಂತರಿಸಿ ತಂತಿಯನ್ನು ಬೇರೆಕಡೆಗೆ ಸ್ಥಳಾಂತರಿಸಲು ಕೂಡಲೇ ಸರಕಾರದವರು ಕ್ರಮ ಕೈಗೊಳ್ಳುವರೆ ಹಾಗೂ ಜೀಜಪಾಬ್ದಾರಿಯಿಂದ ಇದುವರೆಗೆ ಕ್ರಮ ಕೈಗೊಳ್ಳದ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಲಕ್ಷ್ಮೀನರಸಿಂಹಯ್ಯ (ರಾಜ್ಯ ವಿದ್ಯುತ್ ಮಂತ್ರಿಗಳು).—

ಅ) ಆ) ಇ) ಈ) ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲ್ಲೂಕು ದೊಡ್ಡ ಮಾಲಂಗಿ ಗ್ರಾಮದ ಶ್ರೀ ದೊಡ್ಡ ಸಿದ್ದಪ್ಪ ಚನ್ನಬಸಪ್ಪ ರಾಮದುರ್ಗರವರ ಮನೆಯ ಮೇಲೆ ವಿದ್ಯುಚ್ಛಕ್ತಿಯ ಯಾವ ಲೈನೂ ಹಾದು ಹೋಗುತ್ತಿಲ್ಲ. ಇವರ ಸಹೋದರರಾದ ಸಣ್ಣ ಸಿದ್ದಪ್ಪನವರ ಮನೆಯ ಮೇಲೆ ಹಾದು ಹೋಗುವ ೪೦೦ ವೋಲ್ಟೇಜಿನ ಲೈನನ್ನು ೧೪-೧೫ ವರ್ಷಗಳ ಹಿಂದೆ ಎಳೆಯಲಾಯಿತೆಂದೂ ವರದಿಯಾಗಿದೆ,

ಸಣ್ಣ ಸಿದ್ದಪ್ಪನವರು ಸುಮಾರು ೨೫ ವರ್ಷದ ಕೆಳಗೆ ತಮ್ಮ ಮನೆಯ ಮುಂಭಾಗವನ್ನು ಹೆಚ್ಚಿಸಿದ್ದರೆಂದೂ ಈ ಹೆಚ್ಚಿಸಿದ ಭಾಗದಲ್ಲಿ ಲೈನು ಹಾದು ಹೋಗುತ್ತದೆಂದೂ ವರದಿಯಾಗಿದೆ. ಈ ಬಗ್ಗೆ ಅವರು ಮನವಿ ಸಲ್ಲಿಸಿ ಅಂದಾಜುಪಟ್ಟಿ ಮಂಡಳಿಗೆ ತುಂಬಿದರೆ ಲೈನನ್ನು ಮಂಡಳಿಯವರು ಸ್ಥಳಾಂತರಿಸುತ್ತಾರೆ.

ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರ ಹಾಗೂ ರೇಷ್ಮೆ ಸಚಿವರು) — ಮಾನ್ಯ ಬೊಮ್ಮಾಯಿಯವರ ಹೆಸರಿನ ಮುಂದಿರುವ

೧. ೧೯೫೭ನೇ ಇಸವಿಯ ಕರ್ನಾಟಕ ಸ್ಟ್ಯಾಂಪ್ ಶಾಸನದ ೯ನೇ ಕಲಮಿನ ಮೇರೆಗೆ ಕೃಷ್ಣಾ ಮೇಲ್ದಂಡೆ ಯೋಜನೆಯಿಂದ ಜಮೀನು ಕಳೆದುಕೊಂಡವರಿಗೆ ಪುನರ್ವಸತಿ ಮಾಡಲು ಮಂಜೂರಾದ ಭೂಮಿಯನ್ನು ನೋಂದಣಿ ಮಾಡಿಸುವ ಸಂಬಂಧದಲ್ಲಿ ಕೊಡಬೇಕಾದ ಸ್ಟ್ಯಾಂಪು ಶುಲ್ಕದಿಂದ ವಿನಾಯಿತಿ ನೀಡುವುದರ ಬಗ್ಗೆ ದಿನಾಂಕ ೪ನೇ ಜೂನ್ ೮೮ ರಂದು ಹೊರಡಿಸಲಾದ ಆರ್.ಡಿ. ೬೨ ಇ.ಎಸ್.ಆರ್. ೮೮ (ಪಿ)ನೇ ಕ್ರಮಾಂಕದ ಆದೇಶವನ್ನು ಹಾಗೂ ಈ ಸಂಬಂಧದಲ್ಲಿ ದಿನಾಂಕ ೬ನೇ ಜೂನ್ ೮೮ ರಂದು ಹೊರಡಿಸಲಾದ ತಿದ್ದೋಲೆಯೊಂದಿಗೆ ಸಭೆಯ ಮುಂದಿಡುತ್ತೇನೆ.

೨. ಮಾನ್ಯ ರಾಮಕೃಷ್ಣ ಹೆಗಡೆಯವರ ಹೆಸರಿನ ಮುಂದಿರುವ ೧೯೫೭ನೇ ಇಸವಿಯ ಕೇಂದ್ರ ಮಾರಾಟ ಅಧಿನಿಯಮ ೭೪ (೮)ನೇ ಕಲಮಿನ ಮೇರೆಗೆ ಹೆಲಿಕ್ಯಾಪ್ಟರ್‌ಗಳಿಗೆ ದಿನಾಂಕ ೩೧-೧೨-೧೯೯೦ರ ವರೆಗೆ ಕೇಂದ್ರ ಮಾರಾಟ ತೆರಿಗೆ ವಿನಾಯ್ತಿ ನೀಡುವ ಬಗ್ಗೆ ದಿನಾಂಕ ೭-೫-೧೯೮೮ ರಂದು ಹೊರಡಿಸಲಾದ ಎಫ್‌ಡಿ ೨೩. ಸಿ.ಎಸ್.ಎಲ್. ೮೮ರ ಅಧಿಸೂಚನೆಯನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು,—ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

ಶ್ರೀ ವಿನಯಂಕುಮಾರ್ ಸೊರಕೆ.—ಮಾನ್ಯ ಅಧ್ಯಕ್ಷರೇ ನನ್ನ ಪ್ರಶ್ನೆ ಬರಲಿಲ್ಲ,

ಅಧ್ಯಕ್ಷರು —ಪ್ರಶ್ನೋತ್ತರ ವೇಳೆ ಈಗ ಮುಗಿದಿದೆ, ನಾನು ತಮ್ಮನ್ನು ಕರೆದಾಗ ನೀವು ಗೈರು ಹಾಜರಾಗಿದ್ದಿರಿ, ಈಗ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ.

ಶ್ರೀ ವಿನಯಂಕುಮಾರ್ ಸೊರಕೆ.—ಹೊಸಬರಿಗೆ ಈ ರೀತಿ ಮಾಡಿದರೆ ಹೇಗೆ ?

ಅಧ್ಯಕ್ಷರು.—ನಾನು ಕರೆದಾಗ ನೀವು ಇರಲಿಲ್ಲ, ಈಗ ಕುಳಿತುಕೊಳ್ಳಿ. ಪ್ರಶ್ನೋತ್ತರ ವೇಳೆಯಲ್ಲಿ ಯಾವ ಸದಸ್ಯರು ಗೈರುಹಾಜರು ಇರುತ್ತಾರೋ ಅಂತಹವರ ಪ್ರಶ್ನೆಯನ್ನು ಪುನಃ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಗೈರು ಹಾಜರಿದ್ದವರಿಗೆ ಪ್ರಶ್ನೋತ್ತರ ವೇಳೆ ಮುಗಿದ ಮೇಲೆ ಅವಕಾಶ ಕೊಡುವುದಕ್ಕೆ ಬರುವುದಿಲ್ಲ. ಇದುವರೆಗೆ ಯಾರಿಗೂ ಆ ರೀತಿ ಅವಕಾಶ ಕೊಟ್ಟಿಲ್ಲ, ಕೊಡುವುದಕ್ಕೂ ಆಗುವುದಿಲ್ಲ, ನೀವು ಕೂಡ್ರಿ. ರೂಲ್ಸ್ ಪ್ರಕಾರ ಒಂದು ಗಂಟೆ ಮಾತ್ರ ಅವಕಾಶವಿದೆ.